**ದಿ: 09-07-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ವಿ.ಎಮ್.ಎಮ್. ವಕೀಲರಿಂದ: -**

1. ಈ ದಾವೆಯನ್ನು ನಾವು 11 ಜನ ಕೂಡಿ ಮಾಡಿದ್ದೇವೆ. ಭೀಮಶೆಯ್ಯ, ಅವರ ಮಕ್ಕಳಾದ 04 ಜನ ಮಕ್ಕಳಾದ ಶಿವಲಿಂಗಪ್ಪ, ಬಾಲಯ್ಯ, ಹನುಮಯ್ಯ, ಕ್ರಿಷ್ಣಪ್ಪ. ಗೋವಿಂದರಾಜನ ಮಗ ಪರಮೇಶ, ಶಿವಲಿಂಗಪ್ಪ , ಗೋವಿಂದರಾಜ ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ, ಚಂದ್ರಾಯ ತಂದೆ ಹನುಮಂತ್ರಾಯ, ಚಂದ್ರಾಯನ ಮಕ್ಕಳಾದ ಶಿವಲಿಂಗಪ್ಪ ಮತ್ತು ಹನುಮಂತ್ರಾಯ ಇವರ ಮೇಲೆ ದಾರಿಯನ್ನು ಬಿಡದೆ ಇರುವ ಸಲುವಾಗಿ ನಾವು ದಾವೆಯನ್ನು ಮಾಡಿದ್ದೇವೆ. ಹಾಳಜಾಡಲದಿನ್ನಿ ಗ್ರಾಮದಲ್ಲಿ ನನ್ನ ಭಾಗಕ್ಕೆ 5-00 ಎಕರೆ ಜಮೀನು ಬಂದಿರುತ್ತದೆ ಅದರ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ. ಈ ಜಮೀನು ನನ್ನ ಮತ್ತು ನನ್ನ ಚಿಕ್ಕಪ್ಪನ ಮಕ್ಕಳಾದ ಶಿವಪ್ಪ, ನರಸಪ್ಪ ಲಚಮಯ್ಯ, ಹೆಸರಲೇ ಜಂಟಿಯಾಗಿರುತ್ತದೆ. ಪ್ರತಿವಾದಿಯರ ಜಮೀನಿನ ಸರ್ವೆ ನಂಬರ್ ಏನಿದೆ ಎಂದರೆ ಸಾಕ್ಷಿಯು ಅದೇ ಸರ್ವೆ ನಂಬರ್ ಒಂದೇ ಜಮೀನಿನ ಸರ್ವೆ ನಂಬರ್ ಇರುತ್ತದೆ ಎನ್ನು ತ್ತಾರೆ. ನೀವು ನಿಮಗೆ ಸೇರಿದ ಜಮೀನಿನ ಸರ್ವೆ ನಂಬರ್ ಮತ್ತು ಪ್ರತಿವಾದಿಯರಿಗೆ ಸೇರಿದ ಸರ್ವೆ ನಂಬರ್ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನು ತ್ತಾರೆ.

2. ನಮ್ಮ ಹೊಲ ಉತ್ತರ ದಿಕ್ಕಿಗೆ ಇರುತ್ತದೆ, ಉತ್ತರ ದಿಕ್ಕಿಗೆ ಪೂರ್ವ ಪಶ್ಚಿಮವಾಗಿ ಕಾಲುವೆ ಹೋಗಿದ್ದು, ಆ ಕಾಲುವೆಗೆ ನಡುವೆ 3 ಹೊಲಗಳು ಇರುತ್ತವೆ. ಮೊದಲನೇಯ ಹೊಲ ಬುಡಿಗೇರ ಯಂಕಪ್ಪ ಇವರ ಹೊಲ ಇದೆ ಅವರು ತೀರಿಕೊಂಡಿರುತ್ತಾರೆ. ಅವರಿಗೆ ತಿಮ್ಮಯ್ಯ, ಶಿವರಾಜ ಮತ್ತು ವೆಂಕಟೇಶ ಅಂತಾ ಇರುತ್ತಾರೆ. ಅವರ ಜಮೀನಿನ ಸರ್ವೆ ನಂಬರ್ ಏನೂ ಎಂದು ನನಗೆ ಗೊತ್ತಿಲ್ಲ.

2ನೇ ಹೊಲ ನಮ್ಮದು ಹತ್ತಿಕೊಂಡಿದೆ. ನಮ್ಮ ಹೊಲದ ನಂತರ ಪ್ರತಿವಾದಿಯರ ಹೊಲ ಬರುತ್ತದೆ. ಒಂದೆ ಸರ್ವೆ ನಂಬರ್ ನಲ್ಲಿ ಪಟ್ಟಿ ಪಟ್ಟಿಗಳಾಗಿರುತ್ತವೆ. ಕಾಲುವೆ ದಾಟಿದ ಮೇಲೆ ಪ್ರತಿವಾದಿಯರ ಹೊಲಗಳು ಇವೆ. ನನ್ನ ಹೊಲದ ಪಕ್ಕದಲ್ಲಿ ಕರಿಯಪ್ಪನ ಹೊಲ ಬರುತ್ತದೆ. ಕಾಲುವೆ ದಾಟಿದ ಮೇಲೆ ಪ್ರತಿವಾದಿಯರ ಹೊಲಗಳುವೆ ಇವೆ ಎಂದು ದಾವೆಯಲ್ಲಿ ಹೇಳಿ ಬರೆಸಿಲ್ಲ. ಹಾಳಜಾಡಲದಿನ್ನಿ ದಿಂದ ಕಾಲುವೆ ವರೆಗೂ ಕಾಲ್ನಡಿಗೆಯ ದಾರಿ ಯಾರ ಯಾರ ಹೊಲದಲ್ಲಿ ಇದೆ ಎಂದರೆ ಸಾಕ್ಷಿಯು ಬುಡಿಗೇರ ಇವರ ಹೊಲದಲ್ಲಿ ಇದೆ ಎನ್ನುತ್ತಾರೆ. ಈ ವಿಷಯವನ್ನು ನಿಮ್ಮ ವಾದ ಪತ್ರದಲ್ಲಿ ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಬರೆಸಿಲ್ಲ ಎನ್ನುತ್ತಾರೆ. ಈ ದಾವೆಯೊಂದಿಗೆ ಹಾತ್ ನಕಾಶೆಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಸರ್ವೆ ನಂಬರ್ 96 ರಲ್ಲಿ ರಾಮಕೃಷ್ಣ ತಂದೆ ತಿಮ್ಮಯ್ಯ, ಕರಿಯಪ್ಪ ತಂದೆ ರಂಗಣ್ಣ, ಹನುಮಯ್ಯ ತಂದೆ ರಂಗಪ್ಪ ಇವರ ಹೊಲಗಳು ಬರುತ್ತವೆ ಎಂದರೆ ಸಾಕ್ಷಿಯು ಹೌದು ಹನುಮಯ್ಯ ನಾನೇ ಎನ್ನುತ್ತಾರೆ ಮತ್ತು ನಾನು ಖರೀದಿಗೆ ಪಡೆದಿರುತ್ತೇನೆ ಎನ್ನುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟಿಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ